> ದಾಂಪತ್ಯದಲ್ಲಿ ನಿಷ್ಠೆ ಎನ್ನುವುದು ಹೆಣ್ಣಿಗೆ ಆದಿಮ ಕರಾರಾದರೆ ಗಂಡಿಗೆ ಯಾಕಾಗಿ ಅದು ಆಯ್ಕೆ, ಸಾಧಿತವಾಗಿಬಿಟ್ಟರೆ ಕಿರೀಟವಾಗಬೇಕು?

ಉದ್ಗಾರಗಳು, ಕಾಲಾನುಕಾಲದಿಂದಲೂ ಮನುಷ್ಯರನ್ನು ಕಾಡುತ್ತಲೇ ಬಂದಿರುವಂತಹವು, ಇಲ್ಲಿಯ ತನಕ, ಇದೇ ಎನ್ನುವ ಉತ್ತರವನ್ನು ಪಡೆಯುವಲ್ಲಿ ಸೋತಿರುವಂಥವು. 'ಕಾವ್ಯದೇವಿಯು ನಿಂತು ಹೇಳಿ ಮಾಡಿಸಿದ ಕವಿಜೋಡಿ' ಎಂದು ಆ ಕಾಲದ ಎಲ್ಲ ಕಲಾಪ್ರಿಯರಿಗೆ ಭಾಸವಾದ, ಸ್ವತಃ ಹ್ಯೂಸ್, 'ವಿಧಿಗೆ ರುಷುವತ್ತು ನೀಡಿ ನಿನ್ನ ಹಾಜರಾಗಿಸುವಂತೆ ಕೋರಿ ನಾ ನಿನ್ನ ಆಹ್ವಾನಿಸಿಕೊಂಡೆ' ಎಂದು ಸಂಭ್ರಮಿಸಿದ ಮದುವೆಯಾಗಿತ್ತು ಇದು.

ಅದು,
ಅಪರಿಚಿತರ ಅಪರಿಮಿತ ಪರಿಚಯವೆ?
ಸಹ ಬಾಳ್ವೆಯೆ?
ಸುಪ್ತ ಬಂಧನವೆ?
ಸ್ವಾತಂತ್ರ್ಯ ಹರಣವೆ?

ಅದು,
ಆತ್ಮಗಳ ಒಡನಾಟವೆ?
ಅಂಗಾಂಗಂಗಳ ಮುಕ್ತ ಮುದ್ದಾಟವೆ?
ಅಹಂಕಾರಗಳ ಗುದ್ದಾಟವೆ?
ಅಧಿಕಾರ ಸ್ಥಾಪನೆಯ ಬಡಿದಾಟವೆ?
.....
ಪರಸ್ಪರ ವಿಸ್ತರಣೆಯೆ?
.....
ಆದಿಮದ ಬಿರುಕೆ?

ಈ ಎಲ್ಲದರ ಜೊತೆಗೂ ಪ್ರತಿ ಮದುವೆಯ ಮೊದಲ ಘಟ್ಟವೂ ಆಧಾರವಿರುವ, ಆಧಾರರಹಿತ ನಂಬಿಕೆ ಮತ್ತು ಭರವಸೆಗಳ ಘಟ್ಟವೇ ಆಗಿರುವುದು ಗಂಡು ಹೆಣ್ಣಿನ ಸಂಬಂಧದ ಆದಿಮ ಶಕ್ತಿಯೊ? ಮನುಷ್ಯರ ನಂಬಿಕೆಗಳ ಮೇಲಿನ ನಂಬಿಕೆಯೋ ಯಾರು ಬಲ್ಲರು?

ಆದರೆ, ಇವರಿಬ್ಬರೂ ನಂಬಿದ್ದು ಪರಸ್ಪರರಿಗಿಂತ ಹೆಚ್ಚಾಗಿ ಪರಸ್ಪರರ ಕಾವ್ಯದ ಮೇಲಿನ ಪ್ರೀತಿ ಮತ್ತು ಗೌರವವನ್ನು. ಇವರಿಬ್ಬರ ಸಂಬಂಧಕ್ಕೆ ಅಲೌಕಿಕತೆಯ ಸ್ಪರ್ಶವಾದದ್ದು, ದೈವಿಕತೆಯ ಗುಣ ಸೇರಿದ್ದು ಈ ಕಾರಣಕ್ಕೆ. ಕಾವ್ಯವನ್ನೇ ಉಂಡು, ಕುಡಿದು, ಹಾಸಿ ಹೊದ್ದು ಮಲಗಿದ ಅವರ ಬದುಕಿನ ಈ ಘಟ್ಟ ಎಲ್ಲ ಕಾವ್ಯಜೀವಿಗಳಿಗೂ ಪುಳಕ ತರಬಹುದಾದ ಸಂಗತಿ.